**ದಿನಾಂಕ 24/11/2022 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ.ಇ.ಎಸ್ ವಕೀಲರಿಂದ**

ನಾನು ಹರದನಹಳ್ಳಿ ವಾಸಿಯಾಗಿರುತ್ತೇನೆ. ನಾನು ಹರದನಹಳ್ಳಿ ವಾಸಿ ಎಂದು ತೋರಿಸಲು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ಬೇಲೂರಿನಲ್ಲಿ ಕೆಲಸ ಮಾಡುತ್ತಿದ್ದು ಅಲ್ಲಿಯೇ ನಿವೃತ್ತನಾಗಿರುತ್ತೇನೆ. ಶಿಕ್ಷಕನಾಗಿ ನಾನು ಪಡೆಯುವ ಮಾಸಿಕ ಸಂಬಳ ನನ್ನ ಸ್ವಯಾರ್ಜಿತ ವಾಗುತ್ತದೆ ಎಂದರೆ ಸರಿ. ನಾನು ಹಾಸನದಲ್ಲಿ ಖರೀದಿ ಮಾಡಿರುವ ನಿವೇಶನ ಸಂಬಳದ ದುಡ್ಡಿನಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ನನ್ನ ಇತರೆ ಜಮೀನುಗಳು ಸಹ ಇದ್ದವು ಎಂದು.

2. ನೀವು ಸ್ವಯಾರ್ಜಿತವಾಗಿ ಸಂಪಾದನೆ ಮಾಡಿದ ಸ್ವತ್ತು ನಿಮ್ಮ ಜೀವಂತ ಕಾಲದಲ್ಲಿ ಅದು ನಿಮ್ಮದೇ ಸ್ವತ್ತಾಗಿರುತ್ತದೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಮಕ್ಕಳು ಆ ರೀತಿ ಒಪ್ಪುವುದಿಲ್ಲ, ತಾತ ಮುತ್ತಾತಂದಿರ ಆಸ್ತಿಯಾಗಿ ಸೇರುತ್ತದೆ ಎಂದು ಹೇಳುತ್ತಾರೆ ಎಂದು. ನನ್ನನ್ನು ಈ ದಿನ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ರಮೇಶ ರವರು ಕರೆದುಕೊಂಡು ಬಂದಿರುತ್ತಾರೆ. ವಾದಿಯರು 74/2, 74/4 ಎರಡು ಆಸ್ತಿಗಳ ಮೇಲೆ ಮಾತ್ರ ಈ ದಾವೆ ಸಲ್ಲಿಸಿರುತ್ತಾರೆ. ಸದರಿ ಸ್ವತ್ತುಗಳನ್ನು ಮೊದಲನೆ ಪ್ರತಿವಾದಿ ಮಾವಿನ ಕೆರೆಯಲ್ಲಿ ಒಬ್ಬರ ಬಳಿ ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಆಧಾರದ ಮೇರೆಗೆ ಎಲ್ಲಾ ದಾಖಲಾತಿಗಳು ಮೊದಲನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತುಗಳನ್ನು ಮೊದಲನೇ ಪ್ರತಿವಾದಿ ತನ್ನ ಸ್ವಯಾರ್ಜಿತ ಆಸ್ತಿ ಎಂದು 2 ಮತ್ತು 3 ನೇ ಪ್ರತಿವಾದಿಯರಿಗೆ ದಾನಪತ್ರ ಮಾಡಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿರುತ್ತದೆ. 2 ಮತ್ತು 3 ನೇ ಪ್ರತಿವಾದಿಯ ಹೆಸರಿನಲ್ಲಿ ಕಂದಾಯ ದಾಖಲೆಗಳು ಬಂದಿರುವುದು ನನಗೆ ಇತ್ತೀಚೆಗೆ ಗೊತ್ತಾಗಿರುತ್ತದೆ.

3. ಪಿತ್ರಾರ್ಜಿತ ಸ್ವತ್ತುಗಳೆಲ್ಲವೂ ಮಳೆ ಆಧಾರಿತ ಸ್ವತ್ತುಗಳಾಗಿರುತ್ತವೆ ಎಂದರೆ ಸರಿ. ನನ್ನ ಜಮೀನುಗಳು ಸಹ ಮಳೆಯಾಧಾರಿತವಾಗಿರುತ್ತವೆ ಎಂದರೆ ಸರಿ. ಅದರಿಂದ ಹೆಚ್ಚಿನ ಆದಾಯ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ 'ಎ' ಅನುಸೂಚಿ ಸ್ವತ್ತುಗಳನ್ನು ಹೊರತುಪಡಿಸಿ ಬಾಕಿ ಎಲ್ಲವೂ ಮೊದಲನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳಾಗಿರುತ್ತವೆ ಎಂದರೆ ಸರಿಯಲ್ಲ. ಮೊದಲನೇ ಪ್ರತಿವಾದಿ ಮಾವಿನಕೆರೆ ಆಸಾಮಿಯಿಂದ ಖರೀದಿ ಮಾಡಬೇಕಾದರೆ ನಾನು ಉಪಸ್ಥಿತನಿರಲಿಲ್ಲ. ಸರ್ವೆ ನಂ. 74/4 ಮತ್ತು 74/2 ರ ಪತ್ರಗಳನ್ನು ನಾನು ನೋಡಿರುತ್ತೇನೆ. ಮೊದಲನೇ ಪ್ರತಿವಾದಿ ಖರೀದಿ ಮಾಡಿದ ಪತ್ರದಲ್ಲಿ ಒಟ್ಟು ಕುಟುಂಬದ ಆದಾಯದಿಂದ

ಖರೀದಿ ಮಾಡುತ್ತಿದ್ದಾಗಿ ಅದರಲ್ಲಿ ನಮೂದು ಇರುವುದಿಲ್ಲ. ಕುಟುಂಬದ ಎಲ್ಲಾ ಸದಸ್ಯರು ಆರ್ಥಿಕವಾಗಿ ಖರೀದಿ ಮಾಡಲು ಹಣ ನೀಡಿದ್ದರೇ ಎಲ್ಲರ ಹೆಸರುಗಳು ನಮೂದಾಗಬೇಕಾಗಿತ್ತಲ್ಲವೇ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ತಂದೆಯ ಹೆಸರು ಇದ್ದರೆ ಸಾಕು ಎಂದು ಸುಮ್ಮನಾಗಿರುತ್ತಾರೆ ಎಂದು. ದಾವಾ 'ಬಿ ' ಯಿಂದ 'ಡಿ' ಸ್ವತ್ತುಗಳು ಮೊದಲನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳೆಂದು ಗೊತ್ತಿದ್ದರೂ ವಾದಿಯ ಮಾತನ್ನು ಕೇಳಿಕೊಂಡು ಆತನಿಗೆ ಅನುಕೂವಾಗಬೇಕೆಂದು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಹೊಳೆನರಸೀಪುರ.

ನನ್ನ ಹೆಸರು ರಾಜೇಗೌಡ ಆಗಿರುತ್ತದೆ. ನನಗೆ ನ್ಯಾಯಾಲಯದಿಂದ ಸಾಕ್ಷ್ಯನುಡಿಯಲು ತಿಳುವಳಿಕೆ ಪತ್ರ ಬಂದಿತ್ತು. ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಸಾಕ್ಷ್ಯನುಡಿಯಲು ಮೊದಲನೇ ವಾದಿ ಕರೆದುಕೊಂಡು ಬಂದಿರುತ್ತಾರೆ. ನನ್ನ ತಂದೆಯ ವಿರುದ್ಧ ದಾವೆ ಸಲ್ಲಿಸಿದ್ದು, ಈ ರೀತಿಯೇ ಸಾಕ್ಷ್ಯನುಡಿಯಬೇಕೆಂದು ಹೇಳಿ ರಮೇಶ ನನ್ನನ್ನು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ವಾದಿ ಕುಟುಂಬದ ಎಲ್ಲಾ ಸರ್ವೆ ನಂಬರುಗಳ ವಿಚಾರವೂ ನನಗೆ ಗೊತ್ತು. ಈ ದಾವೆಯನ್ನು ವಾದಿ 74/4 ಮುತ್ತ 74/2 ಕ್ಕೆ ಸಲ್ಲಿಸಿರುತ್ತಾರೆ. ಮೊದಲನೇ ಪ್ರತಿವಾದಿ ಸರ್ಕಾರಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಮೊದಲನೇ ಪ್ರತಿವಾದಿಗೆ ಸರ್ಕಾರದಿಂದ ಸಂಬಳ ಬರುತ್ತಿತ್ತು ಎಂದರೆ ಸರಿ. ಮೊದಲನೇ ಪ್ರತಿವಾದಿಗೆ ನಿವೃತ್ತರಾದ ನಂತರ ಪಿಂಚಣಿ ಹಣ ಬಂದಿದೆ ಇಲ್ಲವೋ ನನಗೆ ಗೊತ್ತಿಲ್ಲ.

2. ನನ್ನ ಸ್ವಂತ ಊರು ಬಂಟರಹಳ್ಳಿ. ನಾನು ಮತ್ತು ಮೊದಲನೇ ಪ್ರತಿವಾದಿ ಮಾತಿನ ಸಂಬಂಧ ಇಟ್ಟುಕೊಂಡಿರುತ್ತೇವೆ. ನಾನು ಈ ದಾವೆಯನು ಹೊರತುಪಡಿಸಿ ಬೇರೆ ಯಾವುದೇ ಪ್ರಕರಣಗಳಲ್ಲೂ ಸಾಕ್ಷ್ಯ ನುಡಿದಿರುವುದಿಲ್ಲ. ನಾನು 50 ವರ್ಷಗಳಿಂದಲೂ ನ್ಯಾಯಾಲಯಗಳ ಸುತ್ತ ಸುತ್ತುತ್ತಾ ಇದ್ದೇನೆ. ನನಗೆ ಒಟ್ಟು 9 ಮಕ್ಕಳಿದ್ದು 3 ಗಂಡು ಮಕ್ಕಳಿರುತ್ತಾರೆ. ಸಾಕ್ಷಿಗೆ ತಾನು ಸಲ್ಲಿಸಿರುವ ಪ್ರಮಾಣ ಪತ್ರ ತೋರಿಸಲಾಗಿ ಇದು ಯಾರು ಬರೆದದ್ದು ಎಂದು ಕೇಳಲಾಗಿ ಸಾಕ್ಷಿ ಹೇಳುತ್ತಾರೆ ರಮೇಶ ಮತ್ತು ವಕೀಲರು ಸೇರಿ ಬರೆಸಿರುತ್ತಾರೆ

ಎಂದು. ದಾವಾ ಅನುಸೂಚಿ ಎ ಸ್ವತ್ತುಗಳು ಮಾತ್ರ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು ಬಾಕಿ ಎಲ್ಲವೂ ಮೊದಲನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳಾಗಿರುತ್ತವೆ ಎಂದರೆ ಸರಿಯಲ್ಲ. ದಾವಾ ' ಬಿ ' ಯಿಂದ ಡಿ ಅನುಸೂಚಿ ಸ್ವತ್ತುಗಳು ಮೊದಲನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳಲ್ಲಿ ವಾದಿಗೆ ಭಾಗ ಇಲ್ಲದೇ ಇದ್ದರೂ ವಾದಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಳೆನರಸೀಪುರ.**